2016 ಕ.ತೀ.ವ. 999

(ಕಲಬುರ್ಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲಗೌಡ

## ಶಾಂತಿನಿಕೇತನ ಗೃಹ ನಿರ್ಮಾಣ ಸಹಕಾರ ಸಂಘ ಮತ್ತು ಇತರರು -ವಿರುದ್ಧ- ರಾಘವೇಂದ್ರ ಮತ್ತು ಇತರರು *

ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 100ರಡಿಯಲ್ಲಿ ನಿಯತ ಎರಡನೇ ಮೇಲ್ಮನವಿ.

ಮೇಲ್ಮನವಿದಾರರು ಸಹಕಾರಿ ಸಂಘವಾಗಿದ್ದು ಎದುರುದಾರರು ಮೇಲ್ಮನವಿದಾರರ ವಿರುದ್ಧ ಸಹಾಯಕ ನಿಬಂಧಕರಲ್ಲಿ ವ್ಯಾಜ್ಯವನ್ನು ಹೂಡಿರುತ್ತಾರೆ. ವ್ಯಾಜ್ಯವನ್ನು ವಜಾಗೊಳಿಸಿದ ಕ್ರಮವನ್ನು ಎದುರುದಾರರು ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ಮೂಲಕ ಪ್ರಶ್ನಿಸಲಾಗಿ, ಮೇಲ್ಮನವಿ ಪುರಸ್ಕೃತಗೊಳ್ಳುತ್ತದೆ. ಸಹಾಯಕ ನಿಬಂಧಕರಿಂದ ದೃಢೀಕರಣ ಪತ್ರವನ್ನು ಪಡೆದ ಎದುರುದಾರರು ಅಧಿವಿಚಾರಣಾ ನ್ಯಾಯಾಲಯದಲ್ಲಿ ಜಾರೀ ಅರ್ಜಿಯನ್ನು ಸಲ್ಲಿಸಲಾಗಿ, ಮೇಲ್ಮನವಿದಾರರು ಜಾರೀ ಅರ್ಜಿಯು ಊರ್ಜಿತವಲ್ಲವೆಂದು ಘೋಷಣೆ ಕೋರಿ ಮೂಲ ದಾವೆಯನ್ನು ಸಲ್ಲಿಸುತ್ತಾರೆ. ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 7 ಕ್ರಮಾದೇಶ 11(ಎ)ರಡಿಯಲ್ಲಿ ಎದುರುದಾರರು ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿದ ಅಧಿವಿಚಾರಣಾ ನ್ಯಾಯಾಲಯವು ದಾವಾಪತ್ರವನ್ನು ತಿರಸ್ಕರಿಸಿ ಆದೇಶವನ್ನು ಹೊರಡಿಸುತ್ತದೆ. ಅಧಿವಿಚಾರಣಾ ನ್ಯಾಯಾಲಯದ ಈ ಆದೇಶವನ್ನು ಮೇಲ್ಮನವಿ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ, ಮೇಲ್ಮನವಿ ವಜಾಗೊಳಿಸಲ್ಪಡುತ್ತದೆ. ಕೆಳ ನ್ಯಾಯಾಲಯಗಳ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ನಿಯತ ಎರಡನೇ ಮೇಲ್ಮನವಿ.

* ನಿಯತ ಎರಡನೇ ಮೇಲ್ಮನವಿ ಸಂ.7117/2011, ದಿನಾಂಕ: 2ನೇ ನವೆಂಬರ್, 2015

**ನ್ಯಾಯಾಧಿಕರಣವು, ನ್ಯಾಯಾಧಿಕರಣ ಕಾಯಿದೆ ಕಲಂ 9 ರಡಿಯಲ್ಲಿ ನೀಡಿದ ಆದೇಶವು ಅಂತಿಮವೆಂದು ಹೇಳಲಾಗಿದ್ದು, ಆ ಆದೇಶವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಲು ಆಗುವುದಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಮೇಲ್ಮನವಿಯನ್ನು ವಜಾಗೊಳಿಸಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

*1. ಐಎಲ್ಆರ್ 2013 ಕರ್ನಾ. 3903*
*ಯಶ್‌ವಂತ್ –ವಿರುದ್ಧ– ಹಿರಿಯ ವ್ಯವಸ್ಥಾಪಕರು*
*ಎ.ಬಿ.ಎನ್. ಆಮ್ರೋ ಬ್ಯಾಂಕ್ ಎನ್.ವಿ. ನವದೆಹಲಿ (ಉಲ್ಲೇ) 9*

*2. (1978)2 ಎಸ್‌ಸಿಸಿ 500*
*ಚರಣ್ ಲಾಲ್ ಸಾಹು –ವಿರುದ್ಧ–*
*ನೀಲಂ ಸಂಜೀವರೆಡ್ಡಿ (ಉಲ್ಲೇ) 9*

*3. ಐಎಲ್ಆರ್ 2012 ಕರ್ನಾ. 4261*
*ನರಸಮ್ಮ ವಿ.ಕೆ. –ವಿರುದ್ಧ– ರಾಮ್‌ಪ್ರಸಾದ್ (ಉಲ್ಲೇ) 9*

*4. ಎಐಆರ್ 1969 ಎಸ್‌ಸಿ 78*
*ಧೂಲಾಬಾಯಿ –ವಿರುದ್ಧ– ಮಧ್ಯಪ್ರದೇಶ*
*ರಾಜ್ಯ ಸರ್ಕಾರ ಮತ್ತು ಇನ್ನೊಬ್ಬರು (ಉಲ್ಲೇ) 12*

ಮೇಲ್ಮನವಿದಾರರ ಪರ : ಶ್ರೀ ಡಿ.ಪಿ. ಅಂಬೇಕರ್, ನ್ಯಾಯವಾದಿಗಳು;
ಎದುರುದಾರರ ಪರ : ಶ್ರೀ ಗುರುರಾಜ್ ರಾವ್ ಕಕ್ಕೇರಿ, ನ್ಯಾಯವಾದಿ.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲಗೌಡ:**

ಸಿವಿಲ್ ಪ್ರಕ್ರಿಯಾ ಸಂಹಿತೆಯ (ಸಿಪಿಸಿ) 96ನೇ ಪ್ರಕರಣದ ಅಡಿಯಲ್ಲಿ ವಾದಿಗಳು ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿ ಮತ್ತು ವಾದಪತ್ರವು

'ಕಾನೂನಾತ್ಮಕವಾಗಿ ಪ್ರತಿಷೇಧಿತವಾಗಿದೆಯೆಂದು' ಅಧಿವಿಚಾರಣಾ ನ್ಯಾಯಾಲಯವು ಅದನ್ನು ತಿರಸ್ಕರಿಸಿ ಎ.ಸಂಖ್ಯೆ.2ರಲ್ಲಿ ಹೊರಡಿಸಿದ ಅದೇಶವನ್ನು ಸ್ಥಿರೀಕರಿಸಿ ನೀಡಿದ ಮೇಲ್ಮನವಿ ನ್ಯಾಯಾಲಯದ ತೀರ್ಪು/ಡಿಕ್ರಿಯನ್ನು ವಾದಿಗಳು ಪ್ರಶ್ನಿಸಿ ಈ ಮೇಲ್ಮನವಿಯನ್ನು ದಾಖಲಿಸಿದ್ದಾರೆ. ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣವು (ಸಂಕ್ಷಿಪ್ತವಾಗಿ 'ನ್ಯಾಯಾಧಿಕರಣ') ಮೇಲ್ಮನವಿ ಸಂ.451/1988ರಲ್ಲಿ ಹೊರಡಿಸಿದ ದಿನಾಂಕ 28.8.1990ರ ತೀರ್ಪು ಜಾರಿಗೊಳಿಸಲಾಗದ ಡಿಕ್ರಿಯಾಗಿದೆಯೆಂದು ಘೋಷಣಾ ಡಿಕ್ರಿಯನ್ನು ಹೊರಡಿಸುವಂತೆ ಕೋರಿ ಮತ್ತು ಇ.ಪಿ.ಸಂ.391/2002ರಲ್ಲಿನ ಡಿಕ್ರಿಯನ್ನು ಜಾರಿಗೊಳಿಸುವುದರಿಂದ ಪ್ರತಿವಾದಿಯನ್ನು ನಿರ್ಬಂಧಿಸಿ ಖಾಯಂ ನಿರ್ಬಂಧಕಾಜ್ಞೆಯ ಡಿಕ್ರಿಯನ್ನು ಹೊರಡಿಸುವಂತೆ ಕೋರಿ ಮೇಲ್ಮನವಿದಾರರು ದಾವೆಯನ್ನು ಸಲ್ಲಿಸಿದ್ದಾರೆ.

2. ಈ ಮೇಲ್ಮನವಿಯಲ್ಲಿ ಒಳಗೊಂಡಿರುವ ವಿವಾದಾಂಶವನ್ನು ವಿವೇಚಿಸುವ ಸಲುವಾಗಿ, ಸಂಬಂಧಪಟ್ಟ ಕೆಲವು ಸಂಗತಿಗಳನ್ನು ಸಂಕ್ಷಿಪ್ತವಾಗಿ ಹೇಳುವ ಅಗತ್ಯವಿದೆ. ಮೇಲ್ಮನವಿದಾರ – ವಾದಿಯು (ಸಂಕ್ಷಿಪ್ತವಾಗಿ 'ಸಂಘ') ಕರ್ನಾಟಕ ಸಹಕಾರೀ ಸಂಘಗಳ ಅಧಿನಿಯಮ, 1959 (ಸಂಕ್ಷಿಪ್ತವಾಗಿ 'ಅಧಿನಿಯಮ')ರ ಅಡಿಯಲ್ಲಿ ನೋಂದಣಿಯಾದ ಒಂದು ಸಹಕಾರ ಸಂಘವಾಗಿದೆ. ಪ್ರತಿವಾದಿ–ಎದುರುದಾರನು ಅದರ ಸದಸ್ಯನಾಗಿದ್ದು, ನಿವೇಶನವನ್ನು ಹಂಚಿಕೆ ಮಾಡದಿರುವ ಕಾರಣ ಮೇಲ್ಮನವಿದಾರರ ವಿರುದ್ಧ ಸಂ.ಎಡಿಎನ್ 386/85–86 ಮೊಕದ್ದಮೆಯಲ್ಲಿ ಬಿಜಾಪುರದ ಸಹಕಾರೀ ಸಂಘಗಳ ಸಹಾಯಕ ನಿಬಂಧಕರ ಮುಂದೆ ಅಧಿನಿಯಮದ 70ನೇ ಪ್ರಕರಣದ ಅಡಿಯಲ್ಲಿ ಆ ಬಗ್ಗೆ ಪ್ರಶ್ನೆ ಎತ್ತಿದ್ದಾರೆ. ದಿನಾಂಕ 28.04.1988ರ ಐತೀರ್ಪಿನ ಅನುಸಾರ ಆ ಪ್ರಶ್ನೆಯನ್ನು ತಿರಸ್ಕರಿಸಲಾಯಿತು. ಐತೀರ್ಪನ್ನು ಧಿಕ್ಕರಿಸಿ, ನ್ಯಾಯಾಧಿಕರಣದ ಮುಂದೆ ಅಧಿನಿಯಮದ 105ನೇ ಪ್ರಕರಣದ ಅಡಿಯಲ್ಲಿ ಸಂ.451/1988ರ ಮೇಲ್ಮನವಿಯನ್ನು ಸಲ್ಲಿಸಲಾಯಿತು. 28.08.1990ರಂದು ಮೇಲ್ಮನವಿಯನ್ನು ಪುರಸ್ಕರಿಸಿ, ಹೊಣೆಗಳ ಸಂದಾಯದ ಮೇಲೆ ತುಂಡುಭೂಮಿ/ನಿವೇಶನವನ್ನು ಹಂಚಿಕೆ ಮಾಡುವಂತೆ ಸಂಘಕ್ಕೆ ನಿರ್ದೇಶಿಸಲಾಯಿತು. ನ್ಯಾಯಾಧಿಕರಣವು ಹೊರಡಿಸಿದ ತೀರ್ಪು/ಐತೀರ್ಪು

ಅಂತಿಮವಾಯಿತು. ಅಧಿನಿಯಮದ 101(ಎ)ಪ್ರಕರಣದ ಅಡಿಯಲ್ಲಿ 20.08.2001ರಂದು ಬಿಜಾಪುರದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಎದುರುದಾರರಿಗೆ ಪ್ರಮಾಣಪತ್ರವನ್ನು ನೀಡಿದರು. ಅದರ ಅನುಸಾರ, ನ್ಯಾಯಾಧಿಕರಣವು 451/1988 ಸಂಖ್ಯೆಯ ಮೇಲ್ಮನವಿಯಲ್ಲಿ ಹೊರಡಿಸಿದ ದಿನಾಂಕ 28.08.1990ರ ತೀರ್ಪು/ಐತೀರ್ಪನ್ನು ಜಾರಿಗೊಳಿಸುವಂತೆ ಕೋರಿ ಬಿಜಾಪುರದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಇ.ಪಿ.ಸಂ.391/2002 ಮೊಕದ್ದಮೆಯನ್ನು ದಾಖಲಿಸಲಾಯಿತು. ಸಂಘದ ಮೇಲೆ ಅಮಲ್ಜಾರಿ ಅರ್ಜಿಯ ನೋಟೀಸನ್ನು ಜಾರಿಗೊಳಿಸಿದ್ದು, ಆಕ್ಷೇಪಣೆಗಳನ್ನು ಸಲ್ಲಿಸಲಾಯಿತು. ಬಿಜಾಪುರದ IIನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಹಿರಿಯ ಶ್ರೇಣಿ) ನ್ಯಾಯಾಲಯವು, ದಿನಾಂಕ 28.08.2007ರ ಆದೇಶದ ಮೂಲಕ ಅಮಲ್ಜಾರಿ ಅರ್ಜಿಯು ಸಮರ್ಥನೀಯವಾದುದಾಗಿದೆಯೆಂದು ಮತ್ತು ನ್ಯಾಯಾಧಿಕರಣವು ಹೊರಡಿಸಿದ ತೀರ್ಪು/ಐತೀರ್ಪು ಜಾರಿ ಯೋಗ್ಯವಾಗಿದೆಯೆಂದು ನಿರ್ಣಯಿಸಿತು. ಎದುರುದಾರರ ಪರವಾಗಿ ನಿವೇಶನವನ್ನು ಹಂಚಿಕೆ ಮಾಡುವಂತೆ ಸಂಘಕ್ಕೆ ನಿರ್ದೇಶಿಸಲಾಯಿತು. ಸಂಘವು ಸದರಿ ಆದೇಶವನ್ನು ಧಿಕ್ಕರಿಸಿ ರಿಟ್ ಅರ್ಜಿ ಸಂ.16498/2007 ಅನ್ನು ಸಲ್ಲಿಸಿದ್ದು, ಅದು 17.02.2010ರಂದು ತಿರಸ್ಕೃತಗೊಂಡಿತು.

3. ಸಂಘವು 09.01.2008ರಂದು ಓ.ಎಸ್.ಸಂ.8/2008 ದಾವೆಯನ್ನು ಹೂಡಿ, ಸಂ.451/1998ರ ಮೇಲ್ಮನವಿಯಲ್ಲಿ ನ್ಯಾಯಾಧಿಕರಣವು ಹೊರಡಿಸಿದ ದಿನಾಂಕ 28.8.1990 ಐತೀರ್ಪು/ತೀರ್ಪು ಜಾರಿ ಯೋಗ್ಯವಲ್ಲದ ಡಿಕ್ರಿಯೆಂದು ಘೋಷಣೆ ಮಾಡುವಂತೆ ಮತ್ತು ಬಿಜಾಪುರದ IIನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಹಿರಿಯ ಶ್ರೇಣಿ) ನ್ಯಾಯಾಲಯದ ಕಡತದ ಮೇಲೆ ಇ.ಪಿ.ಸಂ.391/2002 ರಲ್ಲಿ ನೀಡಿದ ಡಿಕ್ರಿಯನ್ನು ಜಾರಿಗೊಳಿಸದಂತೆ ನಿರ್ಬಂಧಿಸಲು ಖಾಯಂ ನಿರ್ಬಂಧಕಾಜ್ಞೆಯ ಡಿಕ್ರಿಯನ್ನು ಹೊರಡಿಸುವಂತೆ ಕೋರಿತು. ಪ್ರತಿವಾದಿಯು, ಸಿಪಿಸಿ ಕ್ರಮಾದೇಶ 7 ನಿಯಮ 11(ಎ) ಮತ್ತು (ಡಿ) ಅಡಿಯಲ್ಲಿ ಐ.ಎ.ಸಂ.2 ಅರ್ಜಿಯನ್ನು ಸಲ್ಲಿಸಿ ವಾದಪತ್ರವನ್ನು ತಿರಸ್ಕರಿಸುವಂತೆ ಕೋರಿದನು. ವಾದಿಗಳು ಐ.ಎ.ಸಂ.2 ಅರ್ಜಿಗೆ ಆಕ್ಷೇಪಣಾ ಹೇಳಿಕೆಗಳನ್ನು ಸಲ್ಲಿಸಿದರು.

4. ಅಧಿವಿಚಾರಣಾ ನ್ಯಾಯಾಲಯವು, ನ್ಯಾಯಾಧಿಕರಣವು ಹೊರಡಿಸಿದ ಆದೇಶಗಳ ಅಂತಿಮತೆಗೆ ಸಂಬಂಧಿಸಿದಂತೆ ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವುದಕ್ಕೆ ಬದ್ಧವಲ್ಲವೆಂಬುದಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ ಅಧಿನಿಯಮ, 1976 (ಸಂಕ್ಷಿಪ್ತವಾಗಿ 'ನ್ಯಾಯಾಧಿಕರಣ ಅಧಿನಿಯಮ')ದ 9ನೇ ಪ್ರಕರಣವನ್ನು ಅವಲೋಕಿಸಿ, ವಾದಪತ್ರದಲ್ಲಿ ನೀಡಿದ ಹೇಳಿಕೆಗಳಿಂದ ದಾವೆಯು ಸಮರ್ಥನೀಯವಲ್ಲವೆಂದು ನಿರ್ಣಯಿಸಿತು. ತತ್ಪರಿಣಾಮವಾಗಿ ವಾದ ಪತ್ರವನ್ನು ತಿರಸ್ಕರಿಸಿತು. ಅದರ ವಿರುದ್ಧ ವಾದಿಗಳು ಮೇಲ್ಮನವಿಯನ್ನು ಸಲ್ಲಿಸಿದ್ದು, ವಾದಪತ್ರವನ್ನು ತಿರಸ್ಕರಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯವು ಸಮರ್ಥನೀಯವಾಗಿದೆಯೆಂದು ನಿರ್ಣಯಿಸಿ, ಮೇಲ್ಮನವಿಯು ವಜಾಗೊಂಡಿತು. ಸದರಿ ಆದೇಶ ಮತ್ತು ತೀರ್ಪನ್ನು ಧಿಕ್ಕರಿಸಿ, ಸಿಪಿಸಿ 100ನೇ ಪ್ರಕರಣದ ಅಡಿಯಲ್ಲಿ ಈ ಎರಡನೇ ಮೇಲ್ಮನವಿಯನ್ನು ಸಲ್ಲಿಸಲಾಗಿದೆ.

5. ಮಾನ್ಯ ನ್ಯಾಯವಾದಿ ಶ್ರೀ ಡಿ.ಪಿ. ಅಂಬೇಕರ್ ವಾದಿಸಿ, ಅಧೀನ ನ್ಯಾಯಾಲಯಗಳು ಸಿಪಿಸಿ ಕ್ರಮಾದೇಶ 7 ನಿಯಮ 11ರ ಉಪಬಂಧವನ್ನು ತಪ್ಪಾಗಿ ಅರ್ಥೈಸಿದ್ದು, ಪ್ರತಿವಾದಿಯು ಪ್ರತಿವಾದದ ರೂಪದಲ್ಲಿ ತೆಗೆದುಕೊಂಡ ಕಾರಣದ ಮೇಲಿಂದಲೇ ವಾದಪತ್ರವನ್ನು ಕಾನೂನುಬಾಹಿರವಾಗಿ ತಿರಸ್ಕರಿಸಲಾಗಿದೆಯೆಂದು ವಾದಿಸಿದ್ದಾರೆ. ದಾವೆಗೆ ಇರುವ ಸ್ಪಷ್ಟವಾದ ವ್ಯಾಜ್ಯಕಾರಣವನ್ನು ವಾದಪತ್ರವು ತೋರಿಸುತ್ತಿದ್ದು, ವಾದಿಗಳು ಪರಿಹಾರವನ್ನು ಕೋರಿ ಸಿವಿಲ್ ನ್ಯಾಯಾಲಯಕ್ಕೆ ಹೋಗುವ ಹಕ್ಕನ್ನು ಹೊಂದಿದ್ದು ಮತ್ತು ಇ.ಪಿ.ಸಂ.391/2002 ಮೊಕದ್ದಮೆಯಲ್ಲಿ 28.08.2007ರಂದು ಹೊರಡಿಸಿದ ಆದೇಶದ ಅನುಸಾರವಾಗಿ ವಾದಿಗಳು ಎತ್ತಿರುವ ವ್ಯಾಜ್ಯಕಾರಣವನ್ನು ಆಧರಿಸಿ, ನಿಗದಿತ ಅವಧಿಯೊಳಗೆ ದಾವೆಯನ್ನು ಹೂಡಿರುವುದರಿಂದ, ಪ್ರಶ್ನಿತ ಆದೇಶ ಮತ್ತು ತೀರ್ಪು ಕಾನೂನುಬಾಹಿರವಾಗಿದೆಯೆಂದು ಅವರು ವಾದಿಸಿದ್ದಾರೆ. ವಿವಾದವು ನ್ಯಾಯಾಧಿಕರಣವು ಹೊರಡಿಸಿದ ತೀರ್ಪು / ಐತೀರ್ಪನ್ನು ಜಾರಿಗೊಳಿಸುವುದಕ್ಕೆ ಮಾತ್ರ ಸಂಬಂಧಿಸಿದ್ದು, ಅಧೀನ ನ್ಯಾಯಾಲಯಗಳು ನ್ಯಾಯಾಧಿಕರಣ ಅಧಿನಿಯಮದ 9ನೇ ಪ್ರಕರಣದ ಉಲ್ಲೇಖವನ್ನು ಮಾಡಿರುವುದು ದೋಷಪೂರ್ಣವಾಗಿದೆ ಮತ್ತು ಕಾನೂನುಬಾಹಿರವಾಗಿದೆ, ಆದ್ದರಿಂದ, ಪ್ರಶ್ನಿತ ತೀರ್ಪು ಮತ್ತು ಆದೇಶವು, ಸಿಪಿಸಿ

100ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸಿ, ಈ ನ್ಯಾಯಾಲಯವು ನಿರ್ಧರಿಸಬೇಕಾದ ಮಹತ್ವದ ಕಾನೂನು ಪ್ರಶ್ನೆಗಳನ್ನು ಎತ್ತಿವೆ ಎಂದು ಮಾನ್ಯ ನ್ಯಾಯವಾದಿಯು ವಾದಿಸಿದ್ದಾರೆ.

6. ಮಾನ್ಯ ನ್ಯಾಯವಾದಿಯ ಅಹವಾಲನ್ನು ಆಲಿಸಿ, ಮೊಕದ್ದಮೆಯಲ್ಲಿನ ದಾಖಲೆಯನ್ನು ಪರಿಶೀಲಿಸಿದ ಮೇಲೆ ಪರಿಗಣಿಸಬೇಕಾದ ಅಂಶವೇನೆಂದರೆ, ಕಾನೂನಿನಿಂದ ಪ್ರತಿಷೇಧಿತವಾಗಿದೆಯೆಂದು ವಾದಪತ್ರವನ್ನು ತಿರಸ್ಕರಿಸಿರುವುದು ಸಮರ್ಥನೀಯವಾಗಿದೆಯೇ? ಎಂಬುದಾಗಿದೆ.

7. ಇದಕ್ಕೆ ಸಂಬಂಧಿಸುವಷ್ಟರ ಮಟ್ಟಿಗೆ ಸಿಪಿಸಿ ಕ್ರಮಾದೇಶ 7, ನಿಯಮ 11 ಅನ್ನು ಈ ಮುಂದೆ ಪರಾಮರ್ಶಿಸಲಾಗಿದೆ.

> ‘‘11. **ವಾದಪತ್ರದ ತಿರಸ್ಕರಣೆ**.– ಈ ಕೆಳಕಂಡ ಸಂದರ್ಭಗಳಲ್ಲಿ ವಾದಪತ್ರವನ್ನು ತಿರಸ್ಕರಿಸತಕ್ಕದ್ದು:–
>
> (ಎ) xxxxxx
>
> (ಬಿ) xxxxxx
>
> (ಸಿ) xxxxxx
>
> (ಡಿ) ವಾದಪತ್ರದಲ್ಲಿನ ಹೇಳಿಕೆಯಿಂದ ದಾವೆಯು ಯಾವುದೇ ಕಾನೂನಿನ ಮೂಲಕ ಪ್ರತಿಷೇಧಿತವಾಗಿದೆಯೆಂದು ಕಂಡು ಬರುವ ಸಂದರ್ಭದಲ್ಲಿ;
>
> xxxxxx

8. ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ ಅಧಿನಿಯಮ, 1976ರ 9ನೇ ಪ್ರಕರಣವು ಇದಕ್ಕೆ ಸಂಬಂಧಿಸಿದ್ದಾಗಿದ್ದು, ಈ ಮುಂದಿನಂತೆ ಪರಾಮರ್ಶಿಸಲಾಗಿದೆ:

> "**೯. ನ್ಯಾಯಾಧಿಕರಣದ ಆದೇಶಗಳ ಅಂತಿಮತೆ.–**
> 8 ಮತ್ತು 8ಎ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟ ಹೊರತು, ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ನ್ಯಾಯಾಧಿಕರಣದ ಪ್ರತಿಯೊಂದು ನಿರ್ಣಯವು ಅಂತಿಮವಾದುದಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ."

9. ವಾದಪತ್ರದಲ್ಲಿ ಮಂಡಿಸಿದ ಪ್ರತಿಪಾದನೆಗಳನ್ನು ಸಂಪೂರ್ಣವಾಗಿ ಸರಿಯೆಂದು ಪರಿಗಣಿಸಿದರೆ, ಅವುಗಳ ಮೇಲ್ಮೈಯಿಂದಲೆ ಆ ದಾವೆಯು ಯಾವುದೇ ಕಾನೂನಿನ ಮೂಲಕ ಪ್ರತಿಷೇಧಿತವಾದುದೆಂದು ಕಂಡು ಬಂದರೆ ವಾದಪತ್ರವನ್ನು ತಿರಸ್ಕರಿಸುವ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಸಿಪಿಸಿ ಕ್ರಮಾದೇಶ 7, ನಿಯಮ 11ರ ಉಪಬಂಧಗಳನ್ನು ಅನ್ವಯಿಸುವ ಮೂಲಕ ವಾದಪತ್ರದ ತಿರಸ್ಕರಣೆಗೆ ಸಂಬಂಧಿಸಿದಂತೆ ವಿವಾದಾಂಶವನ್ನು ನಿರ್ಣಯಿಸುವುದಕ್ಕಾಗಿ, ಪ್ರತಿವಾದಿಯ ಪ್ರತಿರಕ್ಷೆಯ ಹೊರತಾಗಿ ವಾದಪತ್ರದಲ್ಲಿ ಮಂಡಿಸಿದ ಪ್ರತಿಪಾದನೆಗಳು ಮಾತ್ರವೇ ಸುಸಂಬದ್ಧವಾಗಿರುತ್ತವೆ. (***ಯಶವಂತ್ –ವಿರುದ್ಧ– ಹಿರಿಯ ವ್ಯವಸ್ಥಾಪಕರು, ಎ.ಬಿ.ಎನ್. ಆಮ್ರೋ ಬ್ಯಾಂಕ್ ಎನ್.ವಿ., ನವದೆಹಲಿ*** [1]), ಪ್ರತಿವಾದಿಯು ಯಾವುದೇ ಸಮಯದಲ್ಲಾದರೂ ಸಿಪಿಸಿ ಕ್ರಮಾದೇಶ 7, ನಿಯಮ 11 ಅನ್ನು ಅವಲಂಬಿಸುವ ಮೂಲಕ ವಾದಪತ್ರದ ತಿರಸ್ಕರಣೆಯನ್ನು ಕೋರಬಹುದು. ***ಚರಣ್ ಲಾಲ್ ಸಾಹು –ವಿರುದ್ಧ– ನೀಲಂ ಸಂಜೀವರೆಡ್ಡಿ*** [2], ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು, ಕಾನೂನಿನ ಉಪಬಂಧವು ವ್ಯವಹರಣೆಗಳನ್ನು ಪ್ರತಿಷೇಧಿಸಿದರೆ ಅಥವಾ ಪ್ರತಿಷೇಧಿಸಿದಂತೆ ಕಂಡುಬಂದರೆ, ವಾದಪತ್ರ ಅಥವಾ ಅರ್ಜಿಯ ಮೇಲೆಯೇ

1. ಐಎಲ್ಆರ್ 2013 ಕರ್ನಾ.3903
2. (1978)2 ಎಸ್‌ಸಿಸಿ 500

ಹೆಚ್ಚು ಕಾಲವನ್ನು ವ್ಯಯಮಾಡದೆ, ಒಮ್ಮೆಲೇ ಅರ್ಜಿಯನ್ನು ವಜಾಗೊಳಿಸುವುದು ನ್ಯಾಯಾಲಯದ ಕಡೆಯ ಬಾಧ್ಯತೆಯಾಗಿರುತ್ತದೆಂದು ನಿರ್ಣಯಿಸಿದೆ. ***ನರಸಮ್ಮ ವಿ.ಕೆ. -ವಿರುದ್ಧ- ರಾಮ್‌ಪ್ರಸಾದ್*** [3]**,** ಮೊಕದ್ದಮೆಯಲ್ಲಿ, ದಾವೆಯನ್ನು ಗುಣಾವಗುಣಗಳ ಮೇಲೆ ಎದುರಿಸುವ ತನ್ನ ಹಕ್ಕನ್ನು ಲೆಕ್ಕಿಸದೆ ಸ್ವತಃ ದಾವೆಯ ಊರ್ಜಿತತೆಯನ್ನೇ ಪ್ರಶ್ನಿಸುವುದು ಪ್ರತಿವಾದಿಗೆ ಲಭ್ಯವಿರುವ ಒಂದು ಪ್ರತ್ಯೇಕವಾದ ಪರಿಹಾರವಾಗಿದೆಯೆಂದು ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದೆ.

10. ಇಲ್ಲಿನ ವಾದಿ-ಮೇಲ್ಮನವಿದಾರನು ಕರ್ನಾಟಕ ಸಹಕಾರೀ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ ನೋಂದಣಿಯಾದ ಒಂದು ಸಹಕಾರೀ ಸಂಘವಾಗಿದ್ದು, ಪ್ರತಿವಾದಿ-ಎದುರುದಾರನು ಅದರ ಸದಸ್ಯನಾಗಿದ್ದಾನೆ. ಸಂಘ ಮತ್ತು ಅದರ ಸದಸ್ಯನ ನಡುವಿನ ವಿವಾದವು ಅಧಿನಿಯಮದ 70ನೇ ಪ್ರಕರಣದ ಅಡಿಯಲ್ಲಿ ನ್ಯಾಯ ನಿರ್ಣಯ ಮಾಡುವ ವಸ್ತು ವಿಷಯವಾಗಿರಬಹುದಾಗಿದೆ. ಈ ವಿವಾದವನ್ನು ನಿಬಂಧಕರು ಅಧಿನಿಯಮದ 71ನೇ ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು ಚಲಾಯಿಸಿ ನಿರ್ಣಯಿಸಬಹುದಾಗಿದೆ. ನಿಬಂಧಕರು ಹೊರಡಿಸಿದ ಐತೀರ್ಪನ್ನು ಬಾಧಿತ ವ್ಯಕ್ತಿಯು ಅಧಿನಿಯಮದ 105ನೇ ಪ್ರಕರಣದ ಅಡಿಯಲ್ಲಿ ಮೇಲ್ಮನವಿಯ ರೂಪದಲ್ಲಿ ನ್ಯಾಯಾಧಿಕರಣದ ಮುಂದೆ ಪ್ರಶ್ನಿಸಬಹುದಾಗಿದೆ. ಸಂದರ್ಭಾನುಸಾರ, ನಿಬಂಧಕರು ಅಥವಾ ನ್ಯಾಯಾಧಿಕರಣವು ಹೊರಡಿಸಿದ ಐತೀರ್ಪನ್ನು ಅಧಿನಿಯಮದ 101ನೇ ಪ್ರಕರಣದ ಅಡಿಯಲ್ಲಿ ಜಾರಿಗೊಳಿಸಬೇಕಾಗುತ್ತದೆ, ಸದರಿ ಪ್ರಕರಣವನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ:

> ''**101. ಆದೇಶ, ಮುಂತಾದವುಗಳ ಜಾರಿ.-**
> (1) 69ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಅಥವಾ 99ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನು ಮಾಡಿದ ಪ್ರತಿಯೊಂದು ಆದೇಶವು, 71ನೇ ಪ್ರಕರಣದ ಮೇರೆಗೆ

3. ಐಎಲ್‌ಆರ್ 2012 ಕರ್ನಾ. 4261

ಮಾಡಿದ ಪ್ರತಿಯೊಂದು ತೀರ್ಮಾನವು ಅಥವಾ ಐತೀರ್ಪು, 74ನೇ ಪ್ರಕರಣದ ಮೇರೆಗೆ ಸಮಾಪಕನು ಮಾಡಿದ ಪ್ರತಿಯೊಂದು ಆದೇಶವು, ಮತ್ತು 105 ಮತ್ತು 107ನೇ ಪ್ರಕರಣಗಳ ಮೇರೆಗೆ ನ್ಯಾಯಾಧಿಕರಣವು ಮಾಡಿದ ಪ್ರತಿಯೊಂದು ಆದೇಶವು ಮತ್ತು 106ನೇ ಅಥವಾ 108ನೇ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವು ಈ ಅಧಿನಿಯಮದ ಇತರ ಯಾವುದೇ ಉಪಬಂಧಕ್ಕೆ ಒಳಪಟ್ಟು, ಆ ಆದೇಶವನ್ನು, ತೀರ್ಮಾನವನ್ನು ಅಥವಾ ಐತೀರ್ಪನ್ನು ಯಾವ ವ್ಯಕ್ತಿಯ ಅಥವಾ ಸಹಕಾರ ಸಂಘದ ವಿರುದ್ಧ ಪಡೆಯಲಾಗಿದೆಯೋ ಅಥವಾ ಮಾಡಲಾಗಿದೆಯೋ ಆ ವ್ಯಕ್ತಿಗೆ ಅಥವಾ ಸಂಘಕ್ಕೆ ಬಂಧನಕಾರಿಯಾಗಿರತಕ್ಕದ್ದು ಮತ್ತು ಅದನ್ನು ಈಡೇರಿಸದಿದ್ದರೆ,–

(ಎ) ರಿಜಿಸ್ಟ್ರಾರನು ಅಥವಾ ಅವನು ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಸಹಿ ಮಾಡಿದ ಪ್ರಮಾಣಪತ್ರಾನುಸಾರ ಅದನ್ನು ಸಿವಿಲ್ ನ್ಯಾಯಾಲಯದ ಡಿಕ್ರಿಯೆಂದು ಭಾವಿಸತಕ್ಕದ್ದು ಮತ್ತು ಅದನ್ನು ನ್ಯಾಯಾಲಯದ ಡಿಕ್ರಿಯೆಂಬಂತೆ ಅದೇ ರೀತಿಯಲ್ಲಿ ಜಾರಿ ಮಾಡತಕ್ಕದ್ದು; ಅಥವಾ

(ಬಿ) ಭೂ ಕಂದಾಯದ ಬಾಕಿಗಳನ್ನು ವಸೂಲು ಮಾಡಲು ಅದನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅನುಸಾರವಾಗಿ ಮತ್ತು ನಿಯಮಗಳ ಮೇರೆಗೆ ಜಾರಿಗೊಳಿಸತಕ್ಕದ್ದು:

ಪರಂತು, ಅಂಥ ಯಾವುದೇ ಮೊತ್ತವನ್ನು ಅಂಥ ರೀತಿಯಲ್ಲಿ ವಸೂಲು ಮಾಡಲು ಅರ್ಜಿಯನ್ನು,-

(i) ಡೆಪ್ಯೂಟಿ ಕಮೀಷನರರನಿಗೆ ಸಲ್ಲಿಸತಕ್ಕದ್ದು ಮತ್ತು ರಿಜಿಸ್ಟ್ರಾರನು ಅಥವಾ ಅವನು ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಸಹಿ ಮಾಡಿದ ಪ್ರಮಾಣಪತ್ರವನ್ನು ಅದಕ್ಕೆ ಲಗತ್ತಿಸತಕ್ಕದ್ದು;

(ii) ಆ ಆದೇಶದಲ್ಲಿ, ತೀರ್ಮಾನದಲ್ಲಿ ಅಥವಾ ಐತೀರ್ಪಿನಲ್ಲಿ ನಿಗದಿಪಡಿಸಿದ ದಿನಾಂಕದಿಂದ ಮತ್ತು ಅಂಥ ಯಾವುದೇ ದಿನಾಂಕವನ್ನು ನಿಗದಿಪಡಿಸಿರದಿದ್ದರೆ ಸಂದರ್ಭಾನುಸಾರ, ಆ ಆದೇಶದ, ತೀರ್ಮಾನದ ಅಥವಾ ಐತೀರ್ಪಿನ ದಿನಾಂಕದಿಂದ ಹನ್ನೆರಡು ವರ್ಷಗಳೊಳಗೆ ಸಲ್ಲಿಸತಕ್ಕದ್ದು; ಅಥವಾ

(ಸಿ) ಆ ಆದೇಶದ, ತೀರ್ಮಾನ ಅಥವಾ ಐತೀರ್ಪನ್ನು ಯಾವ ವ್ಯಕ್ತಿಯ ಅಥವಾ ಸಹಕಾರ ಸಂಘದ ವಿರುದ್ಧ ಪಡೆಯಲಾಗಿದೆಯೋ ಅಥವಾ ಮಾಡಲಾಗಿದೆಯೋ ಆ ವ್ಯಕ್ತಿಯ ಅಥವಾ ಸಂಘದ ಯಾವುದೇ ಸ್ವತ್ತಿನ ಜಫ್ತಿ ಮತ್ತು ಮಾರಾಟದ ಮೂಲಕ ಅಥವಾ ಜಫ್ತಿಯಿಲ್ಲದೆ ಮಾರಾಟದ ಮೂಲಕ, ರಿಜಿಸ್ಟ್ರಾರನು ಅಥವಾ ಅವನು ಈ ಬಗ್ಗೆ ಅಧಿಕೃತಗೊಳಿಸಿದ ಇತರ ಯಾರೇ ಅಧೀನ ವ್ಯಕ್ತಿಯು ಜಾರಿಗೊಳಿಸತಕ್ಕದ್ದು.

(2) (ಎ) ಈ ಅಧಿನಿಯಮದಲ್ಲಿ ಏನೇ ಇದ್ದರೂ, (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಆದೇಶ, ತೀರ್ಮಾನ ಅಥವಾ ಐತೀರ್ಪಿನ ಜಾರಿ, ನಿರ್ವಹಣೆ ಅಥವಾ ತೀರಿಕೆಗೆ ಸಂಬಂಧಿಸಿದ ಅಥವಾ (1)ನೇ ಉಪ–ಪ್ರಕರಣದ (ಸಿ)ಖಂಡದ ಅನುಸರಣೆಯಲ್ಲಿ ಅಂಥ ಆದೇಶ, ತೀರ್ಮಾನ ಅಥವಾ ಐತೀರ್ಪಿನ ಜಾರಿಯಲ್ಲಿ ನಡೆಸಿದ ಮಾರಾಟದ ಸ್ಥಿರೀಕರಣ ಅಥವಾ ತಳ್ಳಿಹಾಕುವಿಕೆಗೆ ಸಂಬಂಧಿಸಿದ ಅಥವಾ 103ನೇ ಪ್ರಕರಣದ ಮೇರೆಗೆ ಅಥವಾ ಸದರಿ (ಸಿ) ಖಂಡದ ಅನುಸರಣೆಯ ಜಾರಿಯಲ್ಲಿ ಮಾಡಲಾದ ಯಾವುದೇ ಸ್ವತ್ತಿನ ಜಪ್ತಿಗೆ ಸಲ್ಲಿಸಿದ ಯಾವುದೇ ಕ್ಲೇಮು ಅಥವಾ ಆಕ್ಷೇಪಣೆಗೆ ಸಂಬಂಧಿಸಿದ ಪ್ರತಿಯೊಂದು ಪ್ರಶ್ನೆಯನ್ನು ಯಾರ ಮುಂದೆ ಅಂಥ ಪ್ರಶ್ನೆಯು ಉದ್ಭವಿಸುವುದೋ ಆ ರಿಜಿಸ್ಟ್ರಾರನು ಅಥವಾ ಸದರಿ (ಸಿ) ಖಂಡದ ಮೇರೆಗೆ ರಿಜಿಸ್ಟ್ರಾರನು ಅಧಿಕೃತಗೊಳಿಸಿದ (ಈ ಪ್ರಕರಣದಲ್ಲಿ ಇನ್ನು ಮುಂದೆ ಅಧಿಕೃತ ವ್ಯಕ್ತಿ ಎಂದು ಕರೆಯಲಾಗುವ) ಅವನಿಗೆ ಅಧೀನನಾದ ಯಾರೇ ಇತರ ವ್ಯಕ್ತಿಯು ಆದೇಶದ ಮೂಲಕ ತೀರ್ಮಾನಿಸತಕ್ಕದ್ದು.

(ಬಿ) (i) 103ನೇ ಪ್ರಕರಣದ ಮೇರೆಗೆ ಅಥವಾ (1)ನೇ ಉಪ–ಪ್ರಕರಣದ (ಸಿ) ಖಂಡದ ಅನುಸರಣೆಯ ಜಾರಿಯಲ್ಲಿ ಯಾವುದೇ ಸ್ವತ್ತನ್ನು ಜಪ್ತಿ ಮಾಡಿರುವಲ್ಲಿ ಸದರಿ ಸ್ವತ್ತು ಅಂಥ ಜಪ್ತಿಗೆ ಒಳಪಡತಕ್ಕದ್ದಲ್ಲ

ಎಂಬ ಕಾರಣದ ಮೇಲೆ ಅಂಥ ಜಪ್ತಿಯ ವಿರುದ್ಧ ಯಾವುದೇ ಕ್ಲೇಮನ್ನು ಸಲ್ಲಿಸಿರುವಲ್ಲಿ ಅಥವಾ ಯಾವುದೇ ಆಕ್ಷೇಪಣೆ ಮಾಡಿರುವಲ್ಲಿ ರಿಜಿಸ್ಟ್ರಾರನು ಅಥವಾ ಅಧಿಕೃತ ವ್ಯಕ್ತಿಯು ಆ ಕ್ಲೇಮು ಅಥವಾ ಆಕ್ಷೇಪಣೆಯುನ್ನು ತನಿಖೆ ಮಾಡಲು ಕ್ರಮ ಕೈಗೊಳ್ಳತಕ್ಕದ್ದು:

ಪರಂತು, ರಿಜಿಸ್ಟ್ರಾರನು ಅಥವಾ ಅಧಿಕೃತ ವ್ಯಕ್ತಿಯು ಆ ಕ್ಲೇಮು ಅಥವಾ ಆಕ್ಷೇಪಣೆಯನ್ನು ಉದ್ದೇಶಪೂರ್ವಕವಾಗಿ ಅಥವಾ ಅನಾವಶ್ಯಕವಾಗಿ ವಿಳಂಬಿಸಲಾಯಿತೆಂದು ಪರಿಗಣಿಸಿದರೆ, ಅವನು ಅಂಥ ತನಿಖೆಯನ್ನು ನಿರಾಕರಿಸುವ ಆದೇಶವನ್ನು ಮಾಡತಕ್ಕದ್ದು.

(ii) ಸದರಿ ತನಿಖೆಯ ತರುವಾಯ, ರಿಜಿಸ್ಟ್ರಾರನಿಗೆ ಅಥವಾ ಅಧಿಕೃತ ವ್ಯಕ್ತಿಗೆ ಆ ಕ್ಲೇಮು ಅಥವಾ ಆಕ್ಷೇಪಣೆಯಲ್ಲಿ ಹೇಳಲಾದ ಕಾರಣಗಳಿಗಾಗಿ ಅಂಥ ಸ್ವತ್ತು ಜಪ್ತಿಯ ದಿನಾಂಕದಂದು ಯಾವ ವ್ಯಕ್ತಿಯ ಅಥವಾ ಸಹಕಾರ ಸಂಘದ ವಿರುದ್ಧ ಆದೇಶ, ತೀರ್ಪು ಅಥವಾ ಐತೀರ್ಪನ್ನು ಪಡೆಯಲಾಯಿತೋ ಅಥವಾ ಮಾಡಲಾಯಿತೋ ಆ ವ್ಯಕ್ತಿ ಅಥವಾ ಸಹಕಾರ ಸಂಘದ (ಈ ಪ್ರಕರಣದಲ್ಲಿ ಇನ್ನು ಮುಂದೆ ತೀರ್ಪು ಋಣಿ ಎಂದು ಉಲ್ಲೇಖಿಸಲಾಗಿದೆ) ಅಥವಾ ತೀರ್ಪು ಋಣಿಯ ನ್ಯಾಸವಾಗಿ ಯಾವೊಬ್ಬ ವ್ಯಕ್ತಿಯ ಸ್ವಾಧೀನದಲ್ಲಿ, ಅಥವಾ ತೀರ್ಪು ಋಣಿಗೆ ಬಾಡಿಗೆ ಸಂದಾಯ ಮಾಡುತ್ತಿರುವ ಬಾಡಿಗೆದಾರ ಅಥವಾ

ಇತರ ವ್ಯಕ್ತಿಯ ಅನುಭೋಗದಲ್ಲಿ ಇರಲಿಲ್ಲವೆಂದು ಅಥವಾ ಆ ದಿನಾಂಕದಂದು ತೀರ್ಪು ಋಣಿಯ ಸ್ವಾಧೀನದಲ್ಲಿ ಇದ್ದರೂ ಅವನ ಸ್ವಂತ ಖಾತೆಯಲ್ಲಿ ಇಲ್ಲದೆಯೇ ಅಥವಾ ಅವನ ಸ್ವಂತ ಸ್ವತ್ತಾಗಿ ಇಲ್ಲದೆಯೇ ಆದರೆ ಇನ್ನೊಬ್ಬ ವ್ಯಕ್ತಿಯ ಖಾತೆಯಲ್ಲಿ ಅಥವಾ ನ್ಯಾಸದಲ್ಲಿ ಅಥವಾ ಭಾಗಶಃ ಅವನ ಖಾತೆಯಲ್ಲಿ ಮತ್ತು ಇನ್ನೊಬ್ಬ ವ್ಯಕ್ತಿಯ ಖಾತೆಯಲ್ಲಿ ಹಾಗೆ ಅವನ ಸ್ವಾಧೀನದಲ್ಲಿತ್ತೆಂದು ಮನದಟ್ಟಾದಲ್ಲಿ, ರಿಜಿಸ್ಟ್ರಾರನು ಅಥವಾ ಅಧಿಕೃತ ವ್ಯಕ್ತಿಯು ಜಫ್ತಿಯಿಂದ ಸ್ವತ್ತನ್ನು ಪೂರ್ಣವಾಗಿ ಅಥವಾ ತಾನು ಸೂಕ್ತವೆಂದು ಭಾವಿಸುವಷ್ಟರ ಮಟ್ಟಿಗೆ ಬಿಡುಗಡೆಗೊಳಿಸುವ ಆದೇಶವನ್ನು ಮಾಡತಕ್ಕದ್ದು.

(iii) ರಿಜಿಸ್ಟ್ರಾರನಿಗೆ ಅಥವಾ ಅಧಿಕೃತ ವ್ಯಕ್ತಿಗೆ ಸದರಿ ದಿನಾಂಕದಂದು ಆ ಸ್ವತ್ತು ತೀರ್ಪು ಋಣಿಯ ಸ್ವಾಧೀನದಲ್ಲಿ ಇದೆಯೆಂದು ಮತ್ತು ಯಾರೇ ಇತರ ವ್ಯಕ್ತಿಯ ಖಾತೆಯಲ್ಲಿಲ್ಲವೆಂದು ಅಥವಾ ಅವನಿಗೆ ಬಾಡಿಗೆ ಸಂದಾಯ ಮಾಡುತ್ತಿರುವ ಒಬ್ಬ ಬಾಡಿಗೆದಾರ ಅಥವಾ ಇತರ ವ್ಯಕ್ತಿಯು ಅನುಭೋಗದಲ್ಲಿ ಇದೆಯೆಂದು ಮನದಟ್ಟಾದರೆ, ರಿಜಿಸ್ಟ್ರಾರನು ಅಥವಾ ಅಧಿಕೃತ ವ್ಯಕ್ತಿಯು ಆ ಕ್ಲೇಮನ್ನು ತಳ್ಳಿಹಾಕತಕ್ಕದ್ದು.

(iv) ಕ್ಲೇಮು ಅಥವಾ ಆಕ್ಷೇಪಣೆಯನ್ನು ಸಲ್ಲಿಸಿರುವಲ್ಲಿ, ಯಾವ ಪಕ್ಷಕಾರನ ವಿರುದ್ಧ ಆದೇಶವನ್ನು ಮಾಡಲಾಗಿದೆಯೋ ಆ ಪಕ್ಷಕಾರನು ಅಂಥ

ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ವಿವಾದದ ಸ್ವತ್ತಿನಲ್ಲಿ ಅವನು ಕ್ಲೇಮು ಮಾಡುವಂಥ ಹಕ್ಕನ್ನು ಸ್ಥಾಪಿಸಲು ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಬಹುದು. ಆದರೆ ಅಂಥ ದಾವೆಯ ಫಲಿತಾಂಶ, ಯಾವುದಾದರೂ ಇದ್ದರೆ, ಅದಕ್ಕೆ ಒಳಪಟ್ಟು, ರಿಜಿಸ್ಟ್ರಾರನ ಅಥವಾ ಅಧಿಕೃತ ವ್ಯಕ್ತಿಯ ಆದೇಶವು ನಿರ್ಣಾಯಕವಾಗಿರತಕ್ಕದ್ದು.
(ಮುಖ್ಯ ಸಂಗತಿಗಳಿಗೆ ಅಡ್ಡಗೆರೆ ಎಳೆದು ಒತ್ತು ನೀಡಿದ್ದೇನೆ.)

11. ಪ್ರಸ್ತುತ ಮೊಕದ್ದಮೆಯಲ್ಲಿ, ಮೇಲ್ಮನವಿದಾರ ಸಂಘದ ಸದಸ್ಯನಾಗಿರುವ ಎದುರುದಾರನು ಅಧಿನಿಯಮದ 70ನೇ ಪ್ರಕರಣದ ಅಡಿಯಲ್ಲಿ ಪ್ರಶ್ನೆಯನ್ನು ಎತ್ತಿದ್ದು, ಅದನ್ನು 28.04.1988ರಂದು ಸಹಕಾರ ಸಂಘಗಳ ಸಹಾಯಕ ನಿಬಂಧಕರು ವಜಾಗೊಳಿಸಿದ್ದರು ಮತ್ತು ಸದರಿ ಐತೀರ್ಪನ್ನು ಮೇಲ್ಮನವಿ ಸಂಖ್ಯೆ 451/1988ರಲ್ಲಿ ನ್ಯಾಯಾಧಿಕರಣದ ಮುಂದೆ ಪ್ರಶ್ನಿಸಲಾಯಿತು. ಮೇಲ್ಮನವಿಯು ಪುರಸ್ಕೃತಗೊಂಡು, ನಿವೇಶನವನ್ನು ಹಂಚಿಕೆ ಮಾಡುವಂತೆ ಮತ್ತು ಸಂಘದ ಸದಸ್ಯನು ಅಗತ್ಯ ವೆಚ್ಚಗಳನ್ನು ಸಂದಾಯ ಮಾಡಿದ ಮೇಲೆ ಕಾನೂನಿಗನುಸಾರವಾಗಿ ಆತನಿಗೆ ಹಕ್ಕುಳ್ಳ ಪ್ರಯೋಜನಗಳನ್ನು ನೀಡುವಂತೆ ಐತೀರ್ಪನ್ನು ಹೊರಡಿಸಲಾಯಿತು. ನ್ಯಾಯಾಧಿಕರಣವು ಹೊರಡಿಸಿದ ತೀರ್ಪು/ಐತೀರ್ಪನ್ನು ಪ್ರಶ್ನಿಸದಿರುವುದರಿಂದ ಅದು ಅಂತಿಮಗೊಂಡಿತು. ಸಹಕಾರ ಸಂಘಗಳ ಸಹಾಯಕ ನಿಬಂಧಕನಿಗೆ ಅಧಿನಿಯಮದ 101ನೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸಹಕಾರ ಸಂಘಗಳ ನಿಬಂಧಕನ ಅಧಿಕಾರವು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಸಿ–73/ಸಿಇಎ–74 ದಿನಾಂಕ 13.03.1974ರ ಅನುಸಾರವಾಗಿ ಪ್ರಾಪ್ತವಾಗಿದ್ದು, ಆತನು ಸಿವಿಲ್ ನ್ಯಾಯಾಲಯದಲ್ಲಿನ ಡಿಕ್ರಿಯನ್ನು ಜಾರಿಗೊಳಿಸುವುದಕ್ಕೆ ಡಿಕ್ರಿದಾರನನ್ನು ಶಕ್ತಗೊಳಿಸುವ ಪ್ರಮಾಣಪತ್ರವನ್ನು ನೀಡಿದನು. ಅದರ ಅನುಸರಣೆಯಾಗಿ ಇ.ಪಿ.ಸಂಖ್ಯೆ 391/2002 ಅನ್ನು ಸಲ್ಲಿಸಿದ್ದು, ಬಿಜಾಪುರದ IIನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಹಿರಿಯ ಶ್ರೇಣಿ)

ನ್ಯಾಯಾಲಯವು ತೀರ್ಪು ಋಣಿ/ಸಂಘದ ಆಕ್ಷೇಪಣೆಗಳನ್ನು ತಳ್ಳಿಹಾಕಿ ದಿನಾಂಕ 28.08.2007ರ ಆದೇಶವನ್ನು ಹೊರಡಿಸಿತು. ಸದರಿ ಆದೇಶವನ್ನು ಡಬ್ಲ್ಯೂ.ಪಿ.ಸಂಖ್ಯೆ 16498/2007 ಅರ್ಜಿಯ ಮೂಲಕ ಪ್ರಶ್ನಿಸಿದ್ದು, ಸದರಿ ರಿಟ್ ಅರ್ಜಿಯನ್ನು ಪ್ರಾಸಿಕ್ಯೂಷನ್ ಮಾಡದಂತೆ 17.02.2010ರಂದು ವಜಾಗೊಳಿಸಲಾಯಿತು.

12. ***ಧೂಲಾಬಾಯಿ –ವಿರುದ್ಧ– ಮಧ್ಯಪ್ರದೇಶ ರಾಜ್ಯ ಸರ್ಕಾರ ಮತ್ತು ಇನ್ನೊಬ್ಬರು*** [4], ಮೊಕದ್ದಮೆಯಲ್ಲಿ, ಒಂದು ವಿಶೇಷ ಶಾಸನವು ವ್ಯಕ್ತ ಉಪಬಂಧದ ಮೂಲಕ ಅಥವಾ ಇಂಗಿತದ ಮೂಲಕ ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಪ್ರತಿಷೇಧಿಸಿದರೆ ಮತ್ತು ಅಂಥ ಪ್ರಾಧಿಕಾರದ ನಿರ್ಣಯವನ್ನು ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗದಂತೆ ಮಾಡಿದರೆ, ಆಗ ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಹೊರತುಪಡಿಸಬೇಕಾಗುತ್ತದೆ ಎಂದು ಸರ್ವೋಚ್ಚ ನ್ಯಾಯಾಲಯವು ಸ್ಪಷ್ಟಪಡಿಸುತ್ತದೆ. ವಿಶೇಷ ಶಾಸನದಲ್ಲಿ ಯಾವುದಾದರೂ ವ್ಯಕ್ತ ಪ್ರತಿಷೇಧವನ್ನು ಸೃಜಿಸಲಾಗಿದ್ದರೆ ಅಥವಾ ವಿಶೇಷ ಶಾಸನವು ವಿಶೇಷ ನ್ಯಾಯಾಧಿಕರಣವನ್ನು ಸೃಜಿಸಿ, ಅದರ ನಿರ್ಣಯವನ್ನು ಅಂತಿಮವಾಗುವಂತೆ ಮಾಡಿ, ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸಲು ಗುರಿಯಾಗದಂತೆ ಮಾಡಿದರೆ, ಆಗ ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು ಪ್ರತಿಷೇಧಿತವಾಗುತ್ತದೆ.

13. ಮೇಲೆ ಉಲ್ಲೇಖಿಸಲಾದ ನ್ಯಾಯಾಧಿಕರಣ ಅಧಿನಿಯಮದ 9ನೇ ಪ್ರಕರಣವು, (8 ಮತ್ತು 8ಎ ಪ್ರಕರಣಗಳ ಉಪಬಂಧಗಳಿಗೊಳಪಟ್ಟು) ನ್ಯಾಯಾಧಿಕರಣವು ಹೊರಡಿಸಿದ ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲವೆಂದು ಸ್ಪಷ್ಟಪಡಿಸಿದೆ. ಸದರಿ ಉಪಬಂಧದ ಮೂಲಕ ಶಾಸಕಾಂಗವು ನ್ಯಾಯಾಧಿಕರಣವು ಹೊರಡಿಸುವ ಆದೇಶಗಳಿಗೆ ಅಂತಿಮತೆಯನ್ನು ನೀಡಿದೆ ಮತ್ತು ತೀರ್ಪು ಮತ್ತು ಐತೀರ್ಪನ್ನು ನ್ಯಾಯಾಲಯಗಳು

4. ಎಐಆರ್ 1969 ಎಸ್‌ಸಿ 78

ಪರಿಶೀಲಿಸುವುದನ್ನು ಪ್ರತಿಷೇಧಿಸಿದೆ. ಹಾಗಾಗಿ, ಶಾಸನವು ಅಧಿಕಾರ ವ್ಯಾಪ್ತಿಗೆ ಪ್ರತಿಷೇಧವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದೆ.

14. ವಾದಪತ್ರದಲ್ಲಿ ಸಲ್ಲಿಸಿದ ಪ್ರತಿಪಾದನೆಗಳಿಂದ ಮತ್ತು ನಿರ್ವಿವಾದಿತವಾದ ದಾಖಲೆ ಹಾಗೂ ಪಕ್ಷಕಾರರ ನಡುವಿನ ವ್ಯವಹರಣೆಗಳಿಂದ ನ್ಯಾಯಾಧಿಕರಣ ಅಧಿನಿಯಮದ 9ನೇ ಪ್ರಕರಣವು ಅನ್ವಯವಾಗುತ್ತದೆಂಬುದು ಸ್ಪಷ್ಟವಾಗಿ ಗ್ರಹೀತವಾಗಬಲ್ಲ ಮೇಲ್ಕಂಡ ಸಂಗತಿಗಳ ಹಿನ್ನೆಲೆಯಲ್ಲಿ, ಅಧಿವಿಚಾರಣಾ ನ್ಯಾಯಾಲಯವು ಪ್ರತಿವಾದಿಯು ಸಲ್ಲಿಸಿದ ಐ.ಎ. ಸಂಖ್ಯೆ 2 ಅರ್ಜಿಯನ್ನು ಪುರಸ್ಕರಿಸಿ, ದಾವೆಯು ಸಿಪಿಸಿ ಕ್ರಮಾದೇಶ 7ರ ನಿಯಮ 11(ಡಿ) ಮೇರೆಗೆ ಪ್ರತಿಷೇಧಿತವಾಗಿರುವ ಪರಿಣಾಮವಾಗಿ ವಾದ ಪತ್ರವನ್ನು ತಿರಸ್ಕರಿಸಲಾಗಿದೆಯೆಂದು ನಿರ್ಣಯಿಸಿರುವುದು ಸರಿಯಾಗಿಯೇ ಇದೆ.

15. ಅಮಲ್ಜಾರಿ ನ್ಯಾಯಾಲಯವು ಹೊರಡಿಸಿದ ದಿನಾಂಕ 28.08.2007ರ ಆದೇಶದ ಅಂತಿಮತೆಯ ಹಿನ್ನೆಲೆಯಲ್ಲಿ ಮತ್ತು ರಿಟ್ ಅರ್ಜಿ ಸಂಖ್ಯೆ 16948/ 2007 ವಜಾಗೊಂಡ ಕಾರಣದಿಂದ ಪ್ರತ್ಯೇಕ ದಾವೆಯು ಕಾನೂನಿನಿಂದ ಪ್ರತಿಷೇಧಿತವಾಗಿದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ 47ನೇ ಪ್ರಕರಣವು ಪ್ರತ್ಯೇಕ ದಾವೆಯ ಮೂಲಕ ಡಿಕ್ರಿಯ ಜಾರಿ, ನಿರ್ವಹಣೆ ಅಥವಾ ನೆರವೇರಿಕೆಗೆ ಸಂಬಂಧಿಸಿದ ಯಾವುದೇ ಪ್ರಶ್ನೆಯನ್ನು ತೀರ್ಮಾನಿಸುವುದನ್ನು ಪ್ರತಿಷೇಧಿಸುತ್ತದೆ. ಅಂಥ ಪ್ರಶ್ನೆಗಳನ್ನು ಅಮಲ್ಜಾರಿ ನ್ಯಾಯಾಲಯವೇ ನಿರ್ಣಯಿಸಬೇಕಾಗಿರುತ್ತದೆ.

16. ಮೇಲ್ಕಂಡ ನಿರ್ವಿವಾದಿತವಾದ ವಾಸ್ತವ ಸಂಗತಿಗಳ ಜಾಲವನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ, ಅಧೀನ ನ್ಯಾಯಾಲಯಗಳು ಅನುಕ್ರಮವಾಗಿ ಪ್ರಶ್ನಿತ ಆದೇಶ ಮತ್ತು ತೀರ್ಪನ್ನು ಹೊರಡಿಸುವಲ್ಲಿ ಕಾನೂನು ಬಾಹಿರವಾದದ್ದೇನನ್ನೂ ಮಾಡಿಲ್ಲ ಮತ್ತು ಸಿಪಿಸಿ 100ನೇ ಪ್ರಕರಣದ ಮೇರೆಗೆ ಅಧಿಕಾರವನ್ನು ಚಲಾಯಿಸಿ ಪರಿಗಣಿಸುವುದಕ್ಕಾಗಿ ಮಹತ್ವದ ಯಾವುದೇ ಅಂಥ ಕಾನೂನಿನ ಪ್ರಶ್ನೆಯನ್ನು

ಅವು ಎತ್ತಿಲ್ಲ. ಪಕ್ಷಕಾರರ ಹಕ್ಕುಗಳನ್ನು ನ್ಯಾಯಾಧಿಕರಣವು ನಿರ್ಣಯಿಸಿ, ಅದರ ತೀರ್ಪು/ಐತೀರ್ಪು ಅಂತಿಮತೆಯನ್ನು ಹೊಂದಿದ್ದು, ಅಧೀನ ನ್ಯಾಯಾಲಯಗಳು ಹೊರಡಿಸಿದ ಈ ಮೇಲ್ಮನವಿಯಲ್ಲಿ ಪ್ರಶ್ನಿತವಾಗಿರುವ ಆದೇಶ ಮತ್ತು ತೀರ್ಪು ಮೇಲ್ಮನವಿದಾರರ ಹಕ್ಕಿಗೆ ನೇರವಾದ ಮತ್ತು ಗಣನೀಯವಾದ ಪರಿಣಾಮವನ್ನುಂಟು ಮಾಡುವುದಿಲ್ಲ. ಹಾಗಾಗಿ, ಈ ಮೇಲ್ಮನವಿಯಲ್ಲಿ ನಿರ್ಣಯಿಸಲು ಅಗತ್ಯವಿರುವಂಥ ಯಾವುದೇ ಮಹತ್ವದ ಕಾನೂನಿನ ಪ್ರಶ್ನೆಯಿಲ್ಲ.

ಯಾವುದೇ ಮಹತ್ವದ ಕಾನೂನಿನ ಪ್ರಶ್ನೆ ರಹಿತವಾದ ಎರಡನೇ ಮೇಲ್ಮನವಿಯು ಸಮರ್ಥನೀಯವಾದುದಾಗಿಲ್ಲ. ಆದ್ದರಿಂದ, ಈ ಮೇಲ್ಮನವಿಯನ್ನು ವಜಾಗೊಳಿಸಲಾಗಿದೆ.

---